**ನಾಂದಿಪದ**

# ಕನ್ನಡ ತಿಂಗಳು, ಮಕ್ಕಳು ಬೆಳುದಿಂಗಳು



**ಕನ್ನಡದ** ವರ್ತಮಾನ ಮತ್ತು ನಾಳೆಗಳ ಬಗ್ಗೆ ಯೋಚಿಸಲು 'ಕನ್ನಡ ರಾಜ್ಯೋತ್ಸವ' ಸಂದರ್ಭ, ಅಂತರಂಗಕ್ಕೆ ಒದಗಿಬರುವ ಕನ್ನಡಿ. ಕನ್ನಡದ ನಾಳೆಗಳ ಬಗ್ಗೆ ಯೋಚಿಸುವುದೆಂದರೆ, ನಾಡಿನ ಮಕ್ಕಳ ಕುರಿತು ಯೋಚಿಸುವುದೇ ಆಗಿದೆ. ಎಳೆಯರ ಮನಸ್ಸಿನಲ್ಲಿ ಕನ್ನಡದ ಚಿಗುರನ್ನು ಯಾವ ಬಗೆಯಲ್ಲಿ ನೆಲೆಗೊಳಿಸುತ್ತೇವೆ ಎನ್ನುವುದನ್ನು ಆಧರಿಸಿ 'ಕನ್ನಡದ ನಾಳೆಗಳು' ರೂಪುಗೊಳ್ಳುತ್ತವೆ. ಆ ಕಾರಣದಿಂದಲೇ, ಮಕ್ಕಳ ಮನಸ್ಸಿನಲ್ಲಿ 'ಕನ್ನಡ ಜಗತ್ತನ್ನು' ರೂಪಿಸುವುದಕ್ಕೆ ವಿಶೇಷ ಮಹತ್ವವಿದೆ. ಆ ಕನ್ನಡ ಜಗತ್ತಿನ ಬಹುಮುಖ್ಯವಾದ ಭಾಗ – 'ಮಕ್ಕಳ ಸಾಹಿತ್ಯ.'

ಸಾಹಿತ್ಯದ ವಿವಿಧ ಪ್ರಕಾರಗಳು ಕನ್ನಡದಲ್ಲಿ ಸೊಂಪಾಗಿ ಬೆಳೆದಿವೆ; ಮಕ್ಕಳ ಸಾಹಿತ್ಯ ರಚನೆ ಹೇಗಿದೆ? ಈ ಜಿಜ್ಞಾಸೆಯ ಹಿನ್ನೆಲೆಯಲ್ಲಿ ಮಕ್ಕಳ ಸಾಹಿತ್ಯ ರಚನೆಯಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡಿರುವ ನಾಲ್ವರು ಸಾಹಿತಿಗಳ ಅಭಿಪ್ರಾಯಗಳು ಸಂಚಿಕೆಯಲ್ಲಿವೆ. ಈ ಕಿರು ಸಂದರ್ಶನಗಳು ಮಕ್ಕಳ ಸಾಹಿತ್ಯ ಕುರಿತಂತೆ ಆಯಾ ಲೇಖಕರ ಅನುಭವಗಳನ್ನಷ್ಟೇ ಹೇಳುತ್ತಿಲ್ಲ. ಅವು, ಮಕ್ಕಳ ಒಲವು ನಿಲವು ಮತ್ತು ಮಕ್ಕಳ ಸಾಹಿತ್ಯಕ್ಷೇತ್ರ ಎದುರಿಸುತ್ತಿರುವ ಬಿಕ್ಕಟ್ಟುಗಳ ಕುರಿತೂ ಮಾತನಾಡುತ್ತಿವೆ. ಎಳೆಯರನ್ನು ಮಾತ್ರವಲ್ಲದೆ ಹಿರಿಯರನ್ನೂ ಒಳಗೊಳ್ಳುವ ಭಿತ್ತಿ–ಶಕ್ತಿ ಮಕ್ಕಳ ಸಾಹಿತ್ಯಕ್ಕೆ ಇರುವುದನ್ನು ಸೂಚಿಸುತ್ತಿವೆ; ಕನ್ನಡ ಸಾಹಿತ್ಯದ ಸಮೃದ್ಧಿ ಹಾಗೂ ವೈವಿಧ್ಯದ ಬಗ್ಗೆ ಬೀಗುವವರನ್ನು, ಆ ಸುಗ್ಗಿಯಲ್ಲಿ 'ಮಕ್ಕಳ ಸಾಹಿತ್ಯ'ದ ಪಾಲು ಎಷ್ಟಿದೆ ಹಾಗೂ ಅದು ಎಷ್ಟು ಗಟ್ಟಿಯಾಗಿದೆ ಎನ್ನುವ ಪ್ರಶ್ನೆಗಳನ್ನು ಸಹೃದಯರ ಮುಂದಿಡುತ್ತಿವೆ.

'ಪಸರಿಪ ಕನ್ನಡಕೆ ಒಡೆಯನೋರ್ವನೆ ಪಂಪನಾವಗಂ', 'ಕೃಷ್ಣಭಕ್ತ ಮುಸ್ಲಿಂ ಕವಿಗಳು' ಹಾಗೂ 'ಮಕ್ಕಳಿಸ್ಕೂಲು ಜಾನಪದದಲ್ಲವ್ವೇ?' ಲೇಖನಗಳು ಈ ಸಂಚಿಕೆಯ ಹೊಳಪನ್ನು ಹೆಚ್ಚಿಸಿರುವ ರಚನೆಗಳು. ಈ ಬರಹಗಳ ಶೀರ್ಷಿಕೆಗಳೇ ಅವುಗಳ ಸಮಕಾಲೀನ ಮಹತ್ವ ಹಾಗೂ ಅರ್ಥಸಾಧ್ಯತೆಗಳ ಕುರಿತು ಹೇಳುವಂತಿವೆ.

ಸಂಚಿಕೆಯಿಂದ ಸಂಚಿಕೆಗೆ ನಿರಂತರ ಬದಲಾವಣೆಗೆ ಒಡ್ಡಿಕೊಳ್ಳುತ್ತಿರುವ 'ಮಯೂರ'ದ 'ಕನ್ನಡ ಹಬ್ಬ'ದ ಸಂಚಿಕೆ ನಿಮಗೆ ಇಷ್ಟವಾಗುವ ಹಾಗೂ ಯೋಚನೆಗೆ ಹಚ್ಚುವ ನಂಬಿಕೆ ನಮ್ಮದು.

**ಮಯೂರ ಬಳಗ**

editormy@mayura.co.in